# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | 992 |
| ಸದಸ್ಯರ ಹೆಸರು | ಶ್ರೀ ರಾಜೇಂದ್ರ ರಾಜಣ್ಣ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 24-02-2023 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ತುಮಕೂರು ಜಿಲ್ಲೆಯಲ್ಲಿ ಎಷ್ಟು ಹೆಕ್ಟರ್ ಪ್ರದೇಶದಲ್ಲಿ ಸಿರಿಧಾನ್ಯ ಬೆಳೆಯಲಾಗುತ್ತಿದೆ; (ಕಳೆದ 5 ವರ್ಷಗಳ ಸಂಪೂರ್ಣ ಮಾಹಿತಿ ನೀಡುವುದು)</td><td>ತುಮಕೂರು ಜಿಲ್ಲೆಯ ವರ್ಷವಾರು ಸಿರಿಧಾನ್ಯಗಳ ವಿಸ್ತೀರ್ಣದ (ಹೆಕ್ಟೇರ್ ಗಳಲ್ಲಿ) ವಿವರ (ಬೆಳೆ ಸಮೀಕ್ಷೆ ಆಧಾರದ ಮೇರೆಗೆ)
<table>
<tr><th>ಸಿರಿಧಾನ್ಯಗಳು</th><th>2017-18</th><th>2018-19</th><th>2019-20</th><th>2020-21</th><th>2021-22</th></tr>
<tr><td>ನವಣೆ</td><td>530.68</td><td>413.46</td><td>1258.02</td><td>545.4</td><td>385.25</td></tr>
<tr><td>ಸಾಮೆ</td><td>939.14</td><td>699.13</td><td>956.54</td><td>464.07</td><td>362.83</td></tr>
<tr><td>ಕೊರಲೆ</td><td>356.32</td><td>620.18</td><td>5007.43</td><td>808.06</td><td>469.87</td></tr>
<tr><td>ಹಾರಕ</td><td>65.24</td><td>58.3</td><td>72.58</td><td>71.19</td><td>102.47</td></tr>
<tr><td>ಬರಗು</td><td>4.21</td><td>6.2</td><td>3.03</td><td>4.57</td><td>2.70</td></tr>
<tr><td>ಊದಲು</td><td>0</td><td>0.94</td><td>1.32</td><td>6.38</td><td>8.09</td></tr>
<tr><td>ಒಟ್ಟು</td><td>1891.38</td><td>1791.07</td><td>7294.57</td><td>1888.72</td><td>1320.423</td></tr>
</table></td></tr>
<tr><td>ಆ)</td><td>ರೈತರು ಸಿರಿಧಾನ್ಯ ಬೆಳೆಯಲು ಸರ್ಕಾರದ ವತಿಯಿಂದ ನೀಡಲಾಗುವ ಪ್ರೋತ್ಸಾಹ ಧನ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;</td><td>ರಾಜ್ಯದಲ್ಲಿ ಸಿರಿಧಾನ್ಯ ಬೆಳೆದ ರೈತರಿಗೆ ಪ್ರತಿ ಹೆಕ್ಟೇರ್‌ಗೆ ರೂ.10,000/-ಗಳಂತೆ (ಗರಿಷ್ಠ ಎರಡು ಹೆಕ್ಟೇರ್)ಗೆ ಪ್ರೋತ್ಸಾಹಧನ ವಿತರಿಸಲಾಗುತ್ತಿದ್ದು ಸದರಿ ಯೋಜನೆಯನ್ನು 2023-24 ನೇ ಸಾಲಿನಲ್ಲಿಯೂ ಮುಂದುವರೆಸಲಾಗಿರುತ್ತದೆ. ಆದರೆ ಸಿರಿಧಾನ್ಯ ಬೆಳೆಯಲು ಸರ್ಕಾರದ ವತಿಯಿಂದ ನೀಡಲಾಗುವ ಪ್ರೋತ್ಸಾಹಧನ ಹೆಚ್ಚಿಸುವ ಪ್ರಸ್ತಾವನೆ ಪ್ರಸ್ತುತ ಇರುವುದಿಲ್ಲ.</td></tr>
<tr><td>ಇ)</td><td>ಸಿರಿಧಾನ್ಯದ ಬಗ್ಗೆ ಹೆಚ್ಚು ಅರಿವು ಮೂಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು ?</td><td>ರಾಜ್ಯದಲ್ಲಿ ಸಿರಿಧಾನ್ಯಗಳ ಬಗ್ಗೆ ಅರಿವು ಮೂಡಿಸಲು ಸರ್ಕಾರ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br>• ಸಾವಯವ/ಸಿರಿಧಾನ್ಯ ಮೇಳ/ಸಂತೆಗಳನ್ನು ರಾಜ್ಯ/ ಜಿಲ್ಲೆ/ತಾಲ್ಲೂಕು ಮಟ್ಟದಲ್ಲಿ ಆಯೋಜಿಸಲಾಗಿದೆ.<br>• ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳ ಪ್ರತಿ ಕೃಷಿ ಮೇಳದಲ್ಲಿ ಸಾವಯವ / ಸಿರಿಧಾನ್ಯ ಪೆವಿಲಿಯನ್ ಗಳನ್ನು ಸ್ಥಾಪಿಸಲಾಗಿರುತ್ತದೆ.<br>• ರಾಜ್ಯ/ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಪ್ರಮುಖ ಸಾವಯವ/ಸಿರಿಧಾನ್ಯ ಮೇಳಗಳಲ್ಲಿ ರಾಜ್ಯವು ವಸ್ತು ಪ್ರದರ್ಶನದೊಂದಿಗೆ ಭಾಗವಹಿಸುತ್ತಿದೆ.<br>• ರಾಜ್ಯ/ರಾಷ್ಟ್ರೀಯ/ಅಂತರರಾಷ್ಟ್ರೀಯ ಮಟ್ಟದ ಸಾವಯವ ಮತ್ತು ಸಿರಿಧಾನ್ಯಗಳ ಮೇಳಗಳನ್ನು ಆಯೋಜಿಸಿ ಬಿ2ಬಿಗಳ ಆಯೋಜನೆಯೊಂದಿಗೆ ರಾಜ್ಯದ</td></tr>
</table>

| | | |
|---|---|---|
| | | ಸಾವಯವ ಮತ್ತು ಸಿರಿಧಾನ್ಯ ಬೆಳೆಗಾರರಿಗೆ ಮಾರುಕಟ್ಟೆ ಸಂಪರ್ಕ ಕಲ್ಪಿಸಿಕೊಡಲಾಗುತ್ತಿದೆ.<br>• ಆಹಾರ ತಜ್ಞರು, ಪೌಷ್ಟಿಕ ತಜ್ಞರು, ಫಿಟ್‌ನೆಸ್ ಮತ್ತು ಆಹಾರ ಬ್ಲಾಗರ್‌ಗಳು, ಸಿರಿಧಾನ್ಯಕ್ಕಾಗಿ ಓಟ/ನಡಿಗೆ, ಪ್ಯಾನಲ್ ಚರ್ಚೆಗಳು, ಸಾವಯವ ಚಿಲ್ಲರೆ ವ್ಯಾಪಾರಿಗಳು/ ಸಗಟು ವ್ಯಾಪಾರಿಗಳು/ ಸಂಸ್ಕರಣಾದಾರರು, ಸಮೂಹ ಮಾಧ್ಯಮಗಳ ಮೂಲಕ ಸಿರಿಧಾನ್ಯಗಳ ಪಾಕ ವಿಧಾನ ಹಂಚಿಕೆ, ಪಾಕ ವಿಧಾನ ಪುಸ್ತಕಗಳು ಇತ್ಯಾದಿ ಮೂಲಕ ಗ್ರಾಹಕರ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.<br>• ಪತ್ರಿಕಾ ಪ್ರಕಟಣೆ, ಆಕಾಶವಾಣಿ ಮತ್ತು ದೂರದರ್ಶನ ಮಾಧ್ಯಮಗಳ ಮೂಲಕ ಸಿರಿಧಾನ್ಯಗಳ ಬಗ್ಗೆ ಪ್ರಚಾರ ನೀಡಲಾಗಿದೆ.<br>• e-platform ಗಳ ಮೂಲಕ ಕೂಡ ಸಿರಿಧಾನ್ಯಗಳ ಬಗ್ಗೆ ಪ್ರಚಾರ ಕೈಗೊಳ್ಳಲಾಗಿದೆ.<br>• ರಾಜ್ಯದ ಸಾವಯವ ಮತ್ತು ಸಿರಿಧಾನ್ಯ ಉತ್ಪನ್ನಗಳಿಗೆ ಜಾಗತಿಕ ಜಾಗೃತಿ ಮತ್ತು ಮಾರುಕಟ್ಟೆ ಸಂಪರ್ಕಕ್ಕಾಗಿ ಸಾವಯವ ಮತ್ತು ಸಿರಿಧಾನ್ಯ ಮೇಳಗಳನ್ನು ಈ ಕೆಳಕಂಡಂತೆಆಯೋಜಿಸಲಾಗಿರುತ್ತದೆ.<br>a) "ಸಾವಯವ ಮತ್ತು ಸಿರಿಧಾನ್ಯಗಳು, 2017- ರಾಷ್ಟ್ರೀಯ ವಾಣಿಜ್ಯ ಮೇಳ ಏಪ್ರಿಲ್ 28-30, 2017.<br>b) ಸಾವಯವ ಮತ್ತು ಸಿರಿಧಾನ್ಯಗಳು, 2018 - ಅಂತರರಾಷ್ಟ್ರೀಯ ವಾಣಿಜ್ಯ ಮೇಳ, ಜನವರಿ 19 ರಿಂದ 21, 2018<br>c) ಸಾವಯವ ಮತ್ತು ಸಿರಿಧಾನ್ಯಗಳು 2019 ಅಂತರರಾಷ್ಟ್ರೀಯ ವಾಣಿಜ್ಯ ಮೇಳ, ಜನವರಿ 18-20, 2019.<br>d) ಸಿರಿಧಾನ್ಯ ಮತ್ತು ಸಾವಯವ 2023 ಅಂತರರಾಷ್ಟ್ರೀಯ ವಾಣಿಜ್ಯ ಮೇಳ, ಜನವರಿ 20-22, 2023. |

ಸಂಖ್ಯೆ: AGRI/41/ACT/2023

(ಬಿ.ಸಿ. ಪಾಟೀಲ್)

ಕೃಷಿ ಸಚಿವರು